# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಬಿ.ಡಿ./1424/2022
ಪಿ.ಓ.ಎ.ಆರ್.ಇ–06 (ಮಂಡನಾಧಿಕಾರಿಗಳ ಶಾಖೆ).

ಬಹುಮಹಡಿಗಳ ಕಟ್ಟಡ,
ಡಾ. ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು ದಿನಾಂಕ: 07/10/2022.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ

**ವಿಷಯ:–** **ಶ್ರೀ. ಎಂ.ಎಲ್. ಗಣೇಶ್‌ಮೂರ್ತಿ ಬಿನ್ ಎಂ.ಕೆ. ಲೋಕೇಶ್‌ಮೂರ್ತಿ, ಕಛೇರಿ ಅಧೀಕ್ಷಕರು, ಸಮುದಾಯ ಆರೋಗ್ಯ ಕೇಂದ್ರ, ಸೋಲೂರು, ಮಾಗಡಿ ತಾಲೂಕು, ರಾಮನಗರ ಜಿಲ್ಲೆರವರು** ಕರ್ತವ್ಯಲೋಪ ತೋರಿದ ಬಗ್ಗೆ.

****

1. ರಾಮನಗರ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಪೊಲೀಸ್ ಉಪಾಧೀಕ್ಷಕರು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ **ಶ್ರೀ. ಎಂ.ಎಲ್. ಗಣೇಶ್‌ಮೂರ್ತಿ ಬಿನ್ ಎಂ.ಕೆ. ಲೋಕೇಶ್‌ಮೂರ್ತಿ, ಕಛೇರಿ ಅಧೀಕ್ಷಕರು, ಸಮುದಾಯ ಆರೋಗ್ಯ ಕೇಂದ್ರ, ಸೋಲೂರು, ಮಾಗಡಿ ತಾಲೂಕು, ರಾಮನಗರ ಜಿಲ್ಲೆ** (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ). **ಶ್ರೀ. ಪ್ರಕಾಶ್, ಪೊಲೀಸ್ ಇನ್ಸ್‌ಪೆಕ್ಟರ್, ರಾಮನಗರ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆರವರು** (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರಿಗೆ ಬಂದ ಮಾಹಿತಿಯ ಮೇರೆಗೆ ಗೌಪ್ಯ ಮಾಹಿತಿಯನ್ನು ಸಂಗ್ರಹಿಸಿ ಸೋರ್ಸ್ ವರದಿಯನ್ನು ಪೊಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹದಳ, ಕೇಂದ್ರ ವಲಯ, ಬೆಂಗಳೂರುರವರಿಗೆ ಸಲ್ಲಿಸಿದ್ದು, ಅವರು ವರದಿಯನ್ನು ಪರಿಶೀಲಿಸಿ, ಪ್ರಕರಣ ದಾಖಲು ಮಾಡಿಕೊಂಡು ತನಿಖೆ ಕೈಗೊಳ್ಳುವ ಬಗ್ಗೆ ಶ್ರೀ. ವಿ. ರಘುಕುಮಾರ್, ಪೊಲೀಸ್ ಉಪಾಧೀಕ್ಷಕರು, ರಾಮನಗರ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆರವರಿಗೆ ಆದೇಶ ಮಾಡಿರುತ್ತಾರೆ. ದೂರುದಾರರು ನೀಡಿದ ಗೌಪ್ಯ ಮಾಹಿತಿಯನ್ನು ಆಧಾರಿಸಿ, ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದು, ಎದುರುದಾರರು ಅವರ ಬಲ್ಲ ಮೂಲಗಳ ಆದಾಯಕ್ಕಿಂತ ಹೆಚ್ಚಿನ ಆಸ್ತಿಯನ್ನು ಹೊಂದಿರುತ್ತಾರೆಂದು ತನಿಖಾದಿಕಾರಿಗಳು ವರದಿ ಸಲ್ಲಿಸಿದ ಮೇರೆಗೆ ದಾಖಲಾತಿಗಳನ್ನು ಪರಿಶೀಲಿಸಿದಾಗ ಎದುರುದಾರರು **ಅವರ ಸೇವಾ ಅವಧಿಯಲ್ಲಿ ಅವರು ಖರೀದಿಸಿದ ಆಸ್ತಿಗಳ ಬಗ್ಗೆ, ಮನೆ ನವೀಕರಿಸಿದ ಬಗ್ಗೆ ಮತ್ತು ವಾಹನ ಖರೀದಿಸಿದ ಬಗ್ಗೆ ಕ.ನಾ.ಸೇ. (ನಡತೆ) ನಿಯಮಗಳನ್ನು ಪಾಲಿಸದೆ ಕರ್ತವ್ಯಲೋಪ / ದುರ್ನಡತೆ**

ಸಂ.ಕಂಪ್ಲೇಂಟ್/ಉಪಲೋಕ್/ಬಿ.ಡಿ./1424/2022
ಪಿ.ಓ.ಎ.ಆರ್.ಇ–06

**ತೋರಿಸಿರುವುದು** ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2)ರಡಿಯಲ್ಲಿ ತನಿಖೆ ಕೈಗೊಂಡಿದೆ.

2. ಪ್ರಕರಣದ **ಸಂಕ್ಷಿಪ್ತ ಸಾರಾಂಶ:–**

i) ದೂರುದಾರರಾದ ಶ್ರೀ. ಪ್ರಕಾಶ್, ಪೊಲೀಸ್ ನಿರೀಕ್ಷಕರು ನೀಡಿದ ಗೌಪ್ಯ ಮಾಹಿತಿಯ ಆಧಾರದ ಮೇಲೆ ಪೊಲೀಸ್ ಅಧೀಕ್ಷಕರು, ಕೇಂದ್ರ ವಲಯ, ಭ್ರಷ್ಟಾಚಾರ ನಿಗ್ರಹದಳರವರು ಅವರ ಕಛೇರಿಯ ಆದೇಶ ಸಂ:ಎಸಿಬಿ/ಐಎನ್‌ವಿ/ಸಿಆರ್/ಎಸ್.ಪಿ/05/2018, ದಿ: 26/04/2018ರಂದು ಶ್ರೀ. ವಿ. ರಘುಕುಮಾರ್, ಪೊಲೀಸ್ ಉಪಾಧೀಕ್ಷಕರು, ರಾಮನಗರ ಭ್ರಷ್ಟಾಚಾರ ನಿಗ್ರಹದಳದವರಿಗೆ ಎದುರುದಾರರ ವಿರುದ್ಧ ಸ್ವಯಂ ದೂರು ದಾಖಲಿಸಲು ಆದೇಶ ಮಾಡಿರುತ್ತಾರೆ. ಅದರನ್ವಯ ರಾಮನಗರ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಗುನ್ನೆ ನಂ: 04/2018ರಲ್ಲಿ ಕಲಂ 13(1)(ಇ) ರೆ/ವಿ. 13/(2) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988ರಡಿಯಲ್ಲಿ ಪ್ರಕರಣ ದಾಖಲಿಸಿ ತನಿಖೆ ಕೈಗೊಂಡು ವರದಿಯನ್ನು ಸಲ್ಲಿಸಿರುತ್ತಾರೆ.

ತನಿಖಾಧಿಕಾರಿಯವರು ಪ್ರಕರಣದ ತನಿಖೆಯ ಸಮಯದಲ್ಲಿ ಎದುರುದಾರರು ಅವರ ಪರಿಶೀಲನಾ ಅವಧಿಯಾದ ದಿ: 16/12/2004ರಿಂದ ದಿ: 26/04/2018ರವರೆಗೆ ಅವರ ಸರ್ಕಾರಿ ಸೇವೆಯ ಅವಧಿಯಲ್ಲಿ ಎದುರುದಾರರು ಅವರ ಮತ್ತು ಅವರ ಕುಟುಂಬದವರ ಹೆಸರಿನಲ್ಲಿ ಈ ಕೆಳಕಂಡ ಸ್ಥಿರಾಸ್ತಿಗಳನ್ನು ಗಳಿಸಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ.

ii(a) ತನಿಖಾಧಿಕಾರಿಯವರು ಪ್ರಕರಣದ ತನಿಖೆಯ ಸಮಯದಲ್ಲಿ ಎದುರುದಾರರು ಅವರ ಮತ್ತು ಅವರ ಕುಟುಂಬದವರ ಹೆಸರಿನಲ್ಲಿ ಈ ಕೆಳಕಂಡ ಸ್ಥಿರಾಸ್ತಿಗಳನ್ನು ಗಳಿಸಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ:–

| ಕ್ರ. ಸಂ. | ಆಸ್ತಿಯ ವಿವರ | ಯಾರ ಹೆಸರಿನಲ್ಲಿ ಖರೀದಿಸಲಾಗಿದೆ / ವರ್ಗಾಯಿಸಲಾಗಿದೆ. | ಅಂದಾಜು ಮೌಲ್ಯ ರೂ.ಗಳಲ್ಲಿ | ಷರಾ |
|---|---|---|---|---|
| 1 | ರಾಮನಗರ ಜಿಲ್ಲೆ, ಮಾಗಡಿ ತಾಲೂಕು, ಕುದೂರುಗ್ರಾಮದ ಸರ್ವೆ ನಂ.86/1ರಲ್ಲಿನ ಖಾತೆ | ಎದುರುದಾರರಾದ ಶ್ರೀ. ಎಂ.ಎಲ್. ಗಣೇಶ್ ಮೂರ್ತಿ ಮತ್ತು ಅವರ ಪತ್ನಿ ಶ್ರೀಮತಿ. ಜಿ.ಜೆ. ಪರಿಮಳರವರ | 7,20,000/– | ಎದುರುದಾರರು ಖರೀದಿಸುವ ಪೂರ್ವದಲ್ಲಿ ನಿಯಮಿಸಲಾದ ಪ್ರಾಧಿಕಾರದಿಂದ ಅನುಮತಿಯನ್ನು |

ಸಂ.ಕಂಪ್ಲೇಂಟ್/ಉಪಲೋಕ್/ಬಿ.ಡಿ./1424/2022
ಪಿ.ಓ.ಎ.ಆರ್.ಇ–06

| | | | | |
|---|---|---|---|---|
| | ಸಂ.414.<br>1) ಸ್ವತ್ತಿನ ಸಂ.3605, ನಿವೇಶನ ಸಂ.27ರಲ್ಲಿನ 30X40ಅಡಿ ಜಾಗ.<br>2) ಸ್ವತ್ತಿನ ಸಂ.3606, ನಿವೇಶನ ಸಂ.28ರಲ್ಲಿನ 30X40ಅಡಿ ಜಾಗ.<br>3) ಸ್ವತ್ತಿನ ಸಂ.3607, ನಿವೇಶನ ಸಂ.29ರಲ್ಲಿನ 30X40ಅಡಿ ಜಾಗ. | ಹೆಸರಿನಲ್ಲಿ ದಿ: 08/03/2021ರಂದು ಶ್ರೀ. ಕೆ.ಹಚ್. ಚಿಕ್ಕಗಂಗಣ್ಣರವರಿಂದ ಖರೀದಿಸಿರುತ್ತಾರೆ. | | ಪಡೆದಿರುವುದಿಲ್ಲ. ಎದುರುದಾರರು ಕ.ನಾಸೇ.(ನಡತೆ) ನಿಯಮಗಳು 1966 ನಿಯಮ 23(2) ಪ್ರಸ್ತುತ ನಿಯಮ 24(4) ಕ.ನಾಸೇ. (ನಡತೆ) ನಿಯಮಗಳು 2021ನ್ನು ಉಲ್ಲಂಘಿಸಿರುತ್ತಾರೆ. |
| 2 | ಬೆಂಗಳೂರು ಗ್ರಾಮಾಂತರ ಜಿಲ್ಲೆ, ನೆಲಮಂಗಲ ತಾಲೂಕು, ಮಲ್ಲರ ಬಾಣವಾಡಿ ಗ್ರಾಮ, ಹೇಮಗಂಗಾ ನಗರ, ನಿವೇಶನ ಸಂ:92, ಖಾತಾ ಸಂ.567/92ರಲ್ಲಿ 30X20ಅಡಿ ಖಾಲಿ ನಿವೇಶನ. | ಎದುರುದಾರರಾದ ಶ್ರೀ. ಎಂ.ಎಲ್. ಗಣೇಶ್ ಮೂರ್ತಿ ಮತ್ತು ಅವರ ಪತ್ನಿ ಶ್ರೀಮತಿ. ಜಿ.ಜೆ. ಪರಿಮಳರವರ ಹೆಸರಿನಲ್ಲಿ ದಿ: 01/07/2016ರಂದು ಶ್ರೀ. ಮೆಹರರಾಂ, ಪ್ರೋಪ್ರೈಟರ್, ಕ್ಷೇತ್ರಪಾಲ್ ಡೆವಲಪರ್ಸ್‌ರವರಿಂದ ಖರೀದಿಸಿರುತ್ತಾರೆ. | 13,50,000/– | ಎದುರುದಾರರು ಖರೀದಿಸುವ ಪೂರ್ವದಲ್ಲಿ ನಿಯಮಿಸಲಾದ ಪ್ರಾಧಿಕಾರದಿಂದ ಅನುಮತಿಯನ್ನು ಪಡೆದಿರುವುದಿಲ್ಲ. ಎದುರುದಾರರು ಕ.ನಾಸೇ.(ನಡತೆ) ನಿಯಮಗಳು 1966 ನಿಯಮ 23(2) ಪ್ರಸ್ತುತ ನಿಯಮ 24(4) ಕ.ನಾಸೇ. (ನಡತೆ) ನಿಯಮಗಳು 2021ನ್ನು ಉಲ್ಲಂಘಿಸಿರುತ್ತಾರೆ. |
| 3 | ರಾಮನಗರ ಜಿಲ್ಲೆ, ಮಾಗಡಿ ತಾಲೂಕು, ಕುದೂರು ಗ್ರಾಮದ ಸರ್ವೆ ನಂ.86/1ರಲ್ಲಿನ ಖಾತೆ ಸಂ.414.<br>1) ಸ್ವತ್ತಿನ ಸಂ.3605, ನಿವೇಶನ ಸಂ.27ರಲ್ಲಿನ 30X40ಅಡಿ ಜಾಗದಲ್ಲಿ ಒಟ್ಟು 40 ಚ.ಅಡಿಗಳುಳ್ಳ ಮೂರು ಅಂತಸ್ತಿನ ಮನೆಯನ್ನು ದಿ: 05/07/2015ರಲ್ಲಿ ಕಟ್ಟಿಸಿರುತ್ತಾರೆ. | ಎದುರುದಾರರಾದ ಶ್ರೀ. ಎಂ.ಎಲ್. ಗಣೇಶ್ ಮೂರ್ತಿ ಮತ್ತು ಅವರ ಪತ್ನಿ ಶ್ರೀಮತಿ. ಜಿ.ಜೆ. ಪರಿಮಳರವರ ಹೆಸರಿನಲ್ಲಿ. | 68,21,000/– | ಎದುರುದಾರರು ಮನೆ ಕಟ್ಟಿಸುವ ಪೂರ್ವದಲ್ಲಿ / ನಂತರದಲ್ಲಿ ನಿಯಮಿಸಲಾದ ಪ್ರಾಧಿಕಾರದಿಂದ ಅನುಮತಿಯನ್ನು ಪಡೆದಿರುವುದಿಲ್ಲ. ಎದುರುದಾರರು ಕ.ನಾಸೇ.(ನಡತೆ) ನಿಯಮಗಳು 1966 ನಿಯಮ 23(2) ಪ್ರಸ್ತುತ ನಿಯಮ 24(4) ಕ.ನಾಸೇ. (ನಡತೆ) ನಿಯಮಗಳು 2021ನ್ನು ಉಲ್ಲಂಘಿಸಿರುತ್ತಾರೆ. |
| 4 | ಕುದೂರು ಗ್ರಾಮದ ಸರ್ವೆ ನಂ.70/3 ನಿವೇಶನ ಸಂ.1, ವಿಸ್ತೀರ್ಣ 35X65ಅಡಿ ಜಾಗವನ್ನು ಒಟ್ಟು 13.50 ಲಕ್ಷ ರೂ.ಗಳಿಗೆ ಖರೀದಿ ಮಾಡಲು ಉದ್ದೇಶಿಸಿ, ಜಮೀನಿನ ಮಾಲೀಕರ ಜೊತೆ ಮೊದಲು 10,000/– ರೂ. ನೀಡಿ ಕರಾರು | ಎದುರುದಾರರಾದ ಶ್ರೀ. ಎಂ.ಎಲ್. ಗಣೇಶ್ ಮೂರ್ತಿಯವರ ಹೆಸರಿನಲ್ಲಿ. | 10,70,000/– | ಅಸಲು ಕರಾರು ಪತ್ರ ಮಾಡಿಸಿಕೊಳ್ಳುವ ಪೂರ್ವದಲ್ಲಿ ನಿಯಮಿಸಲಾದ ಪ್ರಾಧಿಕಾರದಿಂದ ಅನುಮತಿಯನ್ನು ಪಡೆದಿರುವುದಿಲ್ಲ. ಎದುರುದಾರರು ಕ.ನಾಸೇ.(ನಡತೆ) ನಿಯಮಗಳು 1966 ನಿಯಮ 23(2) ಪ್ರಸ್ತುತ ನಿಯಮ 24(4) ಕ.ನಾಸೇ. (ನಡತೆ) ನಿಯಮಗಳು 2021ನ್ನು ಉಲ್ಲಂಘಿಸಿರುತ್ತಾರೆ. |

ಸಂ.ಕಂಪ್ಲೇಂಟ್/ಉಪಲೋಕ್/ಬಿ.ಡಿ./1424/2022
ಪಿ.ಓ.ಎ.ಆರ್.ಇ–06

| | | | | |
|---|---|---|---|---|
| | ಮಾಡಿಕೊಂಡಿದ್ದು, ತದನಂತರ, ಚೆಕ್ ನಂ. 082162ರಲ್ಲಿ 3,40,000/– ರೂ.<br><br>ಚೆಕ್ ನಂ. 082164ರಲ್ಲಿ 7,20,000/– ರೂ.<br><br>ಒಟ್ಟು 10,70,000/– ರೂ.ಗಳನ್ನು ನೀಡಿ ಕರಾರು ಪತ್ರ ಮಾಡಿಸಿಕೊಂಡಿರುವುದು ಕಂಡುಬಂದಿರುತ್ತದೆ. | | | |

ii(b) ತನಿಖಾಧಿಕಾರಿಗಳು ಪ್ರಕರಣದ ತನಿಖೆಯ ಸಮಯದಲ್ಲಿ ಎದುರುದಾರರು ಅವರ ಮತ್ತು ಅವರ ಕುಟುಂಬದವರ ಹೆಸರಿನಲ್ಲಿ ಈ ಕೆಳಕಂಡ ವಾಹನಗಳನ್ನು ಖರೀದಿಸಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ:–

| ಕ್ರ ಸಂ. | ವಾಹನಗಳ ವಿವರ | ಯಾರ ಹೆಸರಿನಲ್ಲಿ ಖರೀದಿಸಲಾಗಿದೆ. | ಖರೀದಿಸಲಾದ ಮೊತ್ತ ರೂ.ಗಳಲ್ಲಿ | ಷರಾ |
|---|---|---|---|---|
| 1 | ಹೋಂಡಾ ಆಕ್ಟೀವ ಸ್ಕೂಟರ್ ಕೆಎ–52–ಕ್ಯೂ–6302 | ಎದುರುದಾರರ ಪತ್ನಿ ಶ್ರೀಮತಿ. ಜಿ.ಜೆ. ಪರಿಮಳರವರ ಹೆಸರಿನಲ್ಲಿ ದಿ: 04/08/2017ರಂದು | 59,068/– | ವಾಹನ ಖರೀದಿಸುವ ಪೂರ್ವದಲ್ಲಿ ಎದುರುದಾರರು ನಿಯಮಿಸಲಾದ ಪ್ರಾಧಿಕಾರದಿಂದ ಅನುಮತಿ ಪಡೆದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ಹಾಗಾಗಿ ಎದುರುದಾರರು ಕ.ನಾಸೇ.(ನಡತೆ) ನಿಯಮಗಳು 1966 ನಿಯಮ 23(2) ಪ್ರಸ್ತುತ ನಿಯಮ 24(4) ಕ.ನಾಸೇ. (ನಡತೆ) ನಿಯಮಗಳು 2021ನ್ನು ಉಲ್ಲಂಘಿಸಿರುತ್ತಾರೆ. |
| 2 | ಕೆಎ42–ಎಂ–6812 ಮಾರುತಿ ಸ್ವಿಫ್ಟ್ ಡಿಸೈರ್. | ಎದುರುದಾರರ ಹೆಸರಿನಲ್ಲಿ ದಿ: 30/05/2015ರಂದು ಖರೀದಿಸಿರುತ್ತಾರೆ. | 7,93,214/– | ವಾಹನ ಖರೀದಿಸುವ ಪೂರ್ವದಲ್ಲಿ ಎದುರುದಾರರು ನಿಯಮಿಸಲಾದ ಪ್ರಾಧಿಕಾರದಿಂದ ಅನುಮತಿ ಪಡೆದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ಹಾಗಾಗಿ ಎದುರುದಾರರು ಕ.ನಾಸೇ.(ನಡತೆ) ನಿಯಮಗಳು 1966 ನಿಯಮ 23(2) ಪ್ರಸ್ತುತ ನಿಯಮ 24(4) ಕ.ನಾಸೇ. (ನಡತೆ) ನಿಯಮಗಳು 2021ನ್ನು ಉಲ್ಲಂಘಿಸಿರುತ್ತಾರೆ. |

ಸಂ.ಕಂಪ್ಲೇಂಟ್/ಉಪಲೋಕ್/ಬಿ.ಡಿ./1424/2022
ಪಿ.ಓ.ಎ.ಆರ್.ಇ–06

| | | | | |
|---|---|---|---|---|
| 3 | ಕೆಎ–17ವೈ 0797 ಹೀರೋ ಹೋಂಡಾ ಸ್ಪ್ಲೆಂಡರ್ ಪ್ಲಸ್ ಮೋಟಾರ್ ಸೈಕಲ್ | ಎದುರುದಾರರ ಹೆಸರಿನಲ್ಲಿ ದಿ: 08/07/2008ರಂದು | 40,500/– | ವಾಹನ ಖರೀದಿಸುವ ಪೂರ್ವದಲ್ಲಿ ಎದುರುದಾರರು ನಿಯಮಿಸಲಾದ ಪ್ರಾಧಿಕಾರದಿಂದ ಅನುಮತಿ ಪಡೆದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ಹಾಗಾಗಿ ಎದುರುದಾರರು ಕ.ನಾಸೇ.(ನಡತೆ) ನಿಯಮಗಳು 1966 ನಿಯಮ 23(2) ಪ್ರಸ್ತುತ ನಿಯಮ 24(4) ಕ.ನಾಸೇ. (ನಡತೆ) ನಿಯಮಗಳು 2021ನ್ನು ಉಲ್ಲಂಘಿಸಿರುತ್ತಾರೆ. |

iii) ಎದುರುದಾರರು ಅವರ ಸೇವಾ ಪರಿಶೀಲನಾ ಅವಧಿಯಾದ 16/12/2004 ರಿಂದ 26/04/2018ರವರೆಗಿನ ಆಸ್ತಿ ಮತ್ತು ದಾಯಿತ್ವದ ಪಟ್ಟಿಗಳನ್ನು ಆಯಾ ವರ್ಷಗಳಲ್ಲಿ ಸಲ್ಲಿಸದೆ ಇರುವುದು ಹಾಗೂ ನೈಜ ಮಾಹಿತಿಯನ್ನು ಆಸ್ತಿ ಮತ್ತು ದಾಯಿತ್ವ ಪಟ್ಟಿಯಲ್ಲಿ ಸಲ್ಲಿಸದೆ ಇರುವುದು ಕಂಡುಬಂದಿರುತ್ತದೆ. ಇದರಿಂದ ಎದುರುದಾರರು ಕ.ನಾಸೇ. (ನಡತೆ) ನಿಯಮಗಳು 1966 ನಿಯಮ 23(1) ಪ್ರಸ್ತುತ ನಿಯಮ 24(2) ಮತ್ತು 24(6) ಕ.ನಾಸೇ. (ನಡತೆ) ನಿಯಮಗಳು 2021ನ್ನು ಉಲ್ಲಂಘಿಸಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ.

iv) ಎದುರುದಾರರು ಅವರ ಪರಿಶೀಲನಾ ಸೇವಾ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಆಸ್ತಿಗಳನ್ನು ಅರ್ಜಿಸುವ ಪೂರ್ವದಲ್ಲಿ ಯಾವುದೇ ಅನುಮತಿ ಪಡೆದಿರುವುದಿಲ್ಲವೆಂದು ತನಿಖಾಧಿಕಾರಿಯವರ ಮುಂದೆ ಹೇಳಿಕೆ ನೀಡಿರುತ್ತಾರೆ. ಎದುರುದಾರರು ಕಾನೂನು ಸಮ್ಮತ ಆದಾಯಕ್ಕಿಂತ ಅಸಮತೋಲನ ಆಸ್ತಿಗಳನ್ನು ಅವರ ಮತ್ತು ಅವರ ಪತ್ನಿಯ ಹೆಸರಿನಲ್ಲಿ ಹೊಂದಿರುವುದು ಹಾಗೂ ಅನುಮತಿ ಇಲ್ಲದೇ ಸ್ಥಿರಾಸ್ತಿ / ಚರಾಸ್ಥಿಗಳನ್ನು ಖರೀದಿಸಿರುವುದು ಹಾಗೂ ಇತರೆ ಅಂಶಗಳನ್ನು ಎದುರುದಾರರು ಪಾಲಿಸದೆ ಕರ್ತವ್ಯಲೋಪವೆಸಗಿರುವುದು ಕಂಡುಬಂದಿರುತ್ತದೆ. ಎದುರುದಾರರು ನಿಯಮ 23(1), 23(2) ಮತ್ತು 23(3) ಕ.ನಾಸೇ. (ನಡತೆ) ನಿಯಮಗಳು 1966 (ಪ್ರಸ್ತುತ ನಿಯಮ 24(2), 24(3), 24(4) ಮತ್ತು 24(6) ಕ.ನಾಸೇ. (ನಡತೆ) ನಿಯಮಗಳು 2021)ನ್ನು ಉಲ್ಲಂಘಿಸಿ, ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

ಸಂ.ಕಂಪ್ಲೇಂಟ್/ಉಪಲೋಕ್/ಬಿ.ಡಿ./1424/2022
ಪಿ.ಓ.ಎ.ಆರ್.ಇ–06

v) ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು ಮತ್ತು ತನಿಖಾಧಿಕಾರಿಯವರು ದಾಖಲಾತಿಗಳನ್ನು ಕಲೆಹಾಕಿ ಹಾಗೂ ಅಭಿಯೋಜನಾ ಮಂಜೂರಾತಿಯನ್ನು ಪಡೆದು ಎದುರುದಾರರ ವಿರುದ್ಧ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

3. ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು. ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿಯನ್ನು ದಿ: 07/06/2022ರಂದು ಸಲ್ಲಿಸಿರುತ್ತಾರೆ. ಅವರ ಸಮಜಾಯಿಷಿಯಲ್ಲಿ ಪರಿವೀಕ್ಷಣಾ ಟಿಪ್ಪಣಿಯಲ್ಲಿ ನಮೂದಿಸಿದ ಅಂಶಗಳನ್ನು ಅಲ್ಲಗಳೆದಿದ್ದು, ಅವರು ಅವರ ಸಮಜಾಯಿಷಿಯಲ್ಲಿ ಪ್ಯಾರಾ–6ರಲ್ಲಿ ii(a) ಕ್ರಮ ಸಂಖ್ಯೆ–1 ಮತ್ತು 2 ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ, ii(a) ಕ್ರಮ ಸಂಖ್ಯೆ–3ರಲ್ಲಿ ಮನೆಯನ್ನು ಕಟ್ಟುವ ಪೂರ್ವದಲ್ಲಿ ಮತ್ತು ii(a) ಕ್ರಮ ಸಂಖ್ಯೆ–4ರ ಸ್ವತ್ತಿನ ಬಗ್ಗೆ ಕರಾರು ಮಾಡಿಕೊಳ್ಳುವ ಪೂರ್ವದಲ್ಲಿ ಪೂರ್ವಾನುಮತಿಯನ್ನು ಸಕ್ಷಮ ಪ್ರಾಧಿಕಾರದಿಂದ ಪಡೆಯಲಾಗಿದೆ ಎಂದು ತಿಳಿಸಿರುತ್ತಾರೆ. ಆ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ii(b) ಕ್ರಮ ಸಂಖ್ಯೆ–1, 2 ಮತ್ತು 3ರಲ್ಲಿ ನಮೂದಿಸಿದ ವಾಹನಗಳನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ಪಡೆಯಲಾಗಿದೆ ಎಂದು ತಿಳಿಸಿರುತ್ತಾರೆ. ಆದರೆ, ಪೂರ್ವಾನುಮತಿ ಪಡೆದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಎದುರುದಾರರು ಅವರ ಆಕ್ಷೇಪಣೆಯಲ್ಲಿ ಈಗಾಗಲೇ ಮಾನ್ಯ ಜಿಲ್ಲಾ ನ್ಯಾಯಾಲಯ, ರಾಮನಗರದಲ್ಲಿ ಪ್ರಕರಣ ನಡೆಯುತ್ತಿರುವುದರಿಂದ ಈ ಇಲಾಖಾ ವಿಚಾರಣೆನ್ನು ಮುಕ್ತಾಯಗೊಳಿಸಲು ಕೋರಿರುತ್ತಾರೆ. ಆದರೆ ಎದುರುದಾರರು ಪೂರ್ವಾನುಮತಿ ಪಡೆದ ಬಗ್ಗೆ / ಮಾಹಿತಿ ನೀಡಿದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲವಾದ್ದರಿಂದ, ಎದುರುದಾರರು ನೀಡಿದ ಸಮಜಾಯಿಷಿಯು ಸಮರ್ಪಕವಾಗಿರುವುದಿಲ್ಲ. ಹಾಗಾಗಿ ಎದುರುದಾರರ ವಿರುದ್ಧ ಪ್ರಕರಣ ಕೈಬಿಡಲು ಸೂಕ್ತ ಕಾರಣಗಳಾಗಿ ಕಂಡುಬಂದಿರುವುದಿಲ್ಲ.

4. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಎದುರುದಾರರ ವಿರುದ್ಧ ನಡವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣಗಳನ್ನು ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

ಸಂ.ಕಂಪ್ಲೇಂಟ್/ಉಪಲೋಕ್/ಬಿ.ಡಿ./1424/2022
ಪಿ.ಓ.ಎ.ಆರ್.ಇ-06

5. ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರ ಪ್ರಕಾರ ಎದುರುದಾರರು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ನಿಷ್ಠೆ ತೋರಿಸದೆ ಎದುರುದಾರರು ನಿಯಮ 23(1), 23(2) ಮತ್ತು 23(3) ಕ.ನಾಸೇ. (ನಡತೆ) ನಿಯಮಗಳು 1966 (ಪ್ರಸ್ತುತ ನಿಯಮ 24(2), 24(3), 24(4) ಮತ್ತು 24(6) ಕ.ನಾಸೇ. (ನಡತೆ) ನಿಯಮಗಳು 2021)ನ್ನು ಉಲ್ಲಂಘಿಸಿ, ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ಕರ್ತವ್ಯಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಎದುರುದಾರರಾದ ಶ್ರೀ. ಎಂ.ಎಲ್. ಗಣೇಶ್‌ಮೂರ್ತಿ ಬಿನ್ ಎಂ.ಕೆ. ಲೋಕೇಶ್‌ಮೂರ್ತಿ, ಕಛೇರಿ ಅಧೀಕ್ಷಕರು, (ನಿವೃತ್ತಿ ದಿ:30/04/2034) ರವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಮಾಡಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ)ರಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3)ರನ್ವಯ ಪ್ರದತ್ತವಾದ ಅಧಿಕಾರದಡಿ ಸಕ್ಷಮ ಪ್ರಾಧಿಕಾರಕ್ಕೆ ಈ ಕೆಳಕಂಡಂತೆ ಶಿಫಾರಸ್ಸು ಮಾಡಲಾಗಿದೆ.

(1) ಎದುರುದಾರರ ವಿರುದ್ಧ ಅಸಮತೋಲನ ಆಸ್ತಿಯನ್ನು ಹೊಂದಲು ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಮತ್ತು ನಂತರದಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ತಿಳಿಸದೆ ಇರುವ ವಿಚಾರವಾಗಿ ಮಾತ್ರ ಇಲಾಖಾ ವಿಚಾರಣೆ ಮಾಡಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957ರ ನಿಯಮ 14(ಎ)ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ ಹಾಗೂ

(2) ಭಾರತದ ಸರ್ವೋಚ್ಛ ನ್ಯಾಯಾಲಯದ ತೀರ್ಪು AIR 1978 of Hon'ble Supreme Court, Page-3047, State of Karnataka –Vs- Kempaiah, ಈ ಕೇಸಿನಲ್ಲಿ ಹೇಳಿರುವಂತೆ ಎದುರುದಾರರು ಕಾನೂನು ಸಮ್ಮತದ ಆದಾಯಕ್ಕಿಂತ ಅಸಮತೋಲನ ಆದಾಯವನ್ನು ಹೇಗೆ ಹೊಂದಿದರು ಎಂಬುದರ ಬಗ್ಗೆ ವಿಚಾರಣೆ ನಡೆಸಲು ಅವಕಾಶವಿರುವುದಿಲ್ಲ. ಆದುದರಿಂದ, ಸದರಿ ವಿಷಯಕ್ಕೆ ಸಂಬಂಧಿಸಿದ ವಿಚಾರಣೆಯನ್ನು ಸರ್ಕಾರವೇ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957ರಡಿಯಲ್ಲಿ ವಿಚಾರಣೆ ಮಾಡಲು ಕ್ರಮ ಕೈಗೊಳ್ಳಬಹುದಾಗಿದೆ.

ಸಂ.ಕಂಪ್ಲೇಂಟ್/ಉಪಲೋಕ್/ಬಿ.ಡಿ./1424/2022
ಪಿ.ಓ.ಎ.ಆರ್.ಇ-06

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

19/10/22

(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)
ಉಪಲೋಕಾಯುಕ್ತರು-02,
ಕರ್ನಾಟಕ ರಾಜ್ಯ, ಬೆಂಗಳೂರು.